ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
ಆಡಳಿತ ವಿಭಾಗ registrarrur@gmail.com

ಕ್ರ. ಸಂ. ಆಶ್ರೀಮವಿರಾ/ಆಡಳಿತ/2026-27/ 828 ದಿನಾಂಕ: 16.09.26

ವಿಷಯ : ದಿನಾಂಕ 16.09.2026ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಕಳುಹಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 16.09.2026ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,
ರಾಯಚೂರು

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು.
3. ವಿದ್ಯಾವಿಷಯಕ ಪರಿಷತ್ ಸದಸ್ಯರುಗಳಿಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು.
4. ಕುಲಸಚಿವರು(ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
5. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
6. ಮುಖ್ಯಸ್ಥರು/ಸಂಯೋಜಕರು ಎಲ್ಲಾ ಅಧ್ಯಯನ ವಿಭಾಗಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು.
7. ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
8. ಉಪ ಕುಲಸಚಿವರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
9. ನಿರ್ದೇಶಕರು, ಕಾ.ಅ.ಮಂ., ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
10. ಗ್ರಂಥಪಾಲಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
11. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
12. ಸಂಯೋಜಕರು, ಕ್ರೀಡಾ ಮತ್ತು ದೈಹಿಕ ಶಿಕ್ಷಣ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು.
13. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು.
14. ಕಛೇರಿ ಪ್ರತಿ.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
ಮಂತ್ರಾಲಯ ರಸ್ತೆ, ರಾಯಚೂರು
ಶೈಕ್ಷಣಿಕ ವಿಭಾಗ

ದಿನಾಂಕ: 16.09.2026 ರಂದು ಬುಧವಾರ ಬೆಳಗ್ಗೆ 11.00 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು**

| | | | |
|---|---|---|---|
| 1. | ಪ್ರೊ. ಶಿವಾನಂದ ಕೆಳಗಿನಮನಿ, ಗೌರವಾನ್ವಿತ ಕುಲಪತಿಗಳು | – | ಅಧ್ಯಕ್ಷರು |
| 2. | ಪ್ರೊ. ಪಾರ್ವತಿ ಸಿ. ಎಸ್, (ಡೀನರು) | – | ಸದಸ್ಯರು |
| 3. | ಪ್ರೊ. ಪಿ. ಭಾಸ್ಕರ್, (ಡೀನರು) | – | ಸದಸ್ಯರು |
| 4. | ಶ್ರೀ ಮೋಹನ್ ಬಲ್ಲಿದೇವ್ ತಂದೆ ಮಾನಪ್ಪ | – | ಸದಸ್ಯರು |
| 5. | ಶ್ರೀ ಥಾಮಸ್ ಬೆಂಜಮಿನ್ | – | ಸದಸ್ಯರು |
| 6. | ಶ್ರೀ ಸುಶೀಲ್ ಕುಮಾರ್ ತಂದೆ ಮಲ್ಲಯ್ಯ | – | ಸದಸ್ಯರು |
| 7. | ಶ್ರೀ ಚಂದ್ರಶೇಖರಗೌಡ ಬಿನ್ ಸಿದ್ದನಗೌಡ ಪೋ ಪಾಟೀಲ್ | – | ಸದಸ್ಯರು |
| 8. | ಶ್ರೀ ರಮೇಶ ತಂದೆ ಸತ್ಯಪ್ಪ | – | ಸದಸ್ಯರು |
| 9. | ಡಾ. ಯಂಕಣ್ಣ | – | ಸದಸ್ಯರು |
| 10. | ಡಾ. ಸಿದ್ದಪ್ಪ | – | ಸದಸ್ಯರು |
| 11. | ಶ್ರೀ. ಪರ್ವತರೆಡ್ಡಿ | – | ಸದಸ್ಯರು (ಆನ್‌ಲೈನ್) |
| 12. | ಡಾ. ಚನ್ನಬಸಪ್ಪ ಮೇಟಿ | – | ಸದಸ್ಯರು (ಆನ್‌ಲೈನ್) |
| 13. | ಡಾ. ಈರಣ್ಣ. ಪೂಜಾರಿ | – | ಸದಸ್ಯರು |
| 14. | ಡಾ. ಈರಣ್ಣ. ಜೆ | – | ಸದಸ್ಯರು |
| 15. | ಶ್ರೀ. ಶೇಖಪ್ಪ. ಬಿ. ರ್‍ಯಾಖಾ | – | ಸದಸ್ಯರು |
| 16. | ಡಾ. ಜಿ.ಎಸ್.ಬಿರಾದಾರ, ಗ್ರಂಥಪಾಲಕರು | – | ಸದಸ್ಯರು |
| 17. | ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) | – | ಸದಸ್ಯರು |
| 18. | ಡಾ. ಎ. ಚನ್ನಪ್ಪ ಕೆ.ಎ.ಎಸ್. ಕುಲಸಚಿವರು | – | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸುತ್ತ ಸಭಾಧ್ಯಕ್ಷರ ಅನುಮತಿಯೊಂದಿಗೆ ಈ ಕೆಳಗಿನ ವಿಷಯಗಳನ್ನು ಚರ್ಚಿಸಿದರು.

**ವಿಷಯ ಕ್ರಮಾಂಕ (1) :**
ದಿನಾಂಕ 22.01.2026ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ಅನುಪಾಲನಾ ವರದಿ ಕುರಿತು.

**ಚರ್ಚೆ :**
ದಿನಾಂಕ 22.01.2026 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ಅನುಪಾಲನಾ ವರದಿಯನ್ನು ಸಲ್ಲಿಸುವ ಸಂದರ್ಭದಲ್ಲಿ ವಿಷಯ ಕ್ರಮಾಂಕ 02 ಬಿಸಿಎ ಮತ್ತು ಬಿಬಿಎ ಕೋರ್ಸುಗಳ ಅನುಮೋದನೆಗೆ ಸಂಬಂಧಿಸಿದಂತೆ, ಶ್ರೀ ಥಾಮಸ್ ಬೆಂಜಮಿನ್, ವಿದ್ಯಾವಿಷಯಕ ಸದಸ್ಯರು ಎಐಸಿಟಿ ಅನುಮೋದನೆಯನ್ನು ಪಡೆಯುವ ಸಂದರ್ಭದಲ್ಲಿ ಎಐಸಿಟಿ ನಿರ್ದಿಷ್ಟ ಮೊತ್ತದ ಠೇವಣಿಯನ್ನು ಪ್ರತಿ ವರ್ಷ ಕಟ್ಟಬೇಕಾಗಿರುತ್ತದೆ ಸದರಿ ಠೇವಣಿ ಕಟ್ಟಿರುವುದನ್ನು ಪರಿಶೀಲಿಸಲು ಕೋರಿದರು, ಒಂದುವೇಳೆ ಠೇವಣಿಯನ್ನು ಪಾವತಿಸದೇ ವಿಶ್ವವಿದ್ಯಾನಿಲಯದ

ಅನುಮೋದನೆಯೊಂದಿಗೆ ಪ್ರವೇಶಾತಿಯನ್ನು ಪಡೆದಲ್ಲಿ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತದೆ ಎಂದು ತಿಳಿಸಿದರು ಮತ್ತು ಡಾ. ಯಂಕಣ್ಣ ಇವರು ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಹಿಂದಿನ ವರ್ಷಗಳ ಎಐಸಿಟಿ ಅನುಮೋದನೆಯನ್ನು ಪರಿಶೀಲಿಸಲು ತಿಳಿಸಿದರು

**ನಿರ್ಣಯ:**

ಎಐಸಿಟಿ ಪರವಾನಿಗೆ ಕುರಿತು ಚರ್ಚಿಸಿದ ನಂತರ ಸಭೆಯು ದಿನಾಂಕ 22.01.2026ರ ವಿದ್ಯಾವಿಷಯಕ ಪರಿಷತ್ ನಿರ್ಣಯಗಳ ಮೇಲೆ ಕೈಗೊಂಡ ಕ್ರಮಗಳನ್ನು ಅನುಮೋದಿಸಲಾಯಿತು.

**ವಿಷಯ ಕ್ರಮಾಂಕ (2) :**

ದಿನಾಂಕ 19.05.2026ರಂದು ನಡೆದ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು.

**ಚರ್ಚೆ:**

ದಿನಾಂಕ 19.05.2026 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ನಡವಳಿಗಳನ್ನು ದೃಢೀಕರಿಸುವ ಸಂದರ್ಭದಲ್ಲಿ ವಿಷಯ ಕ್ರಮಾಂಕ 05 ಉಪ ಕ್ರಮಾಂಕ 03ರ ಪಿಹೆಚ್.ಡಿ ಪದವಿ ನೊಂದಣಿ ಸಂಬಂಧಿಸಿದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರಿಗೆ ಗೈಡ್‌ಶಿಪ್ ನೀಡಬೇಕೆಂದು ಡಾ. ಈರಣ್ಣ. ಜೆ ಮನವಿ ಮಾಡಿದರು.

**ನಿರ್ಣಯ:**

ಮೇಲಿನ ವಿಷಯದ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು ಮತ್ತು ದಿನಾಂಕ 19.05.2026ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.

**ವಿಷಯ ಕ್ರಮಾಂಕ (3) :**

ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸಗಳ ಕರಡು ಕ್ರಮನಿಯಮಾವಳಿಗಳನ್ನು ಅನುಮೋದಿಸುವ ಕುರಿತು.

**ಚರ್ಚೆ:**

ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸಗಳ ಕರಡು ಕ್ರಮನಿಯಮಾವಳಿಗಳನ್ನು ಅನುಮೋದಿಸಲು ಕಾಲಾವಕಾಶವನ್ನು ನೀಡಬೇಕೆಂದು ಶ್ರೀ ಥಾಮಸ್ ಬೆಂಜಮಿನ್, ಸಭೆಗೆ ತಿಳಿಸದರು ಈ ಸಂದರ್ಭದಲ್ಲಿ ಕ್ರಮನಿಯಮಾವಳಿಗಳನ್ನು ಅಂತಿಮಗೊಳಿಸಲು ಒಂದು ಸಮಿತಿಯನ್ನು ರಚಿಸಿದಲ್ಲಿ ಸೂಕ್ತವಾಗುತ್ತದೆ ಎಂದು ಸಭೆಗೆ ತಿಳಿಸಿದರು ಇದಕ್ಕೆ ಸಭೆಯ ಸದಸ್ಯರುಗಳು ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಚರ್ಚೆಯ ನಂತರ ಈ ಕೆಳಕಾಣಿಸಿದಂತೆ ಸಮಿತಿಯನ್ನು ರಚಿಸಲಾಯಿತು. ಸದರಿ ಸಮಿತಿಯು 10 ದಿನಗಳಲ್ಲಿ ತಮ್ಮ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು.

1. ಶ್ರೀ ಥಾಮಸ್ ಬೆಂಜಮಿನ್ – ಅಧ್ಯಕ್ಷರು
2. ಶ್ರೀ ಮೋಹನ್ ಬಲ್ಲಿದೇವ್ ತಂದೆ ಮಾನಪ್ಪ – ಸದಸ್ಯರು
3. ಡಾ. ಯಂಕಣ್ಣ – ಸದಸ್ಯರು
4. ಡಾ. ಈರಣ್ಣ. ಪೂಜಾರಿ – ಸದಸ್ಯರು
5. ಡಾ. ಈರಣ್ಣ. ಜೆ – ಸದಸ್ಯರು
6. ಡಾ. ಸಿದ್ದಪ್ಪ – ಸದಸ್ಯರು
7. ವಿಶೇಷಾಧಿಕಾರಿಗಳು (ಶೈಕ್ಷಣಿಕ ವಿಭಾಗ) – ಸದಸ್ಯ ಕಾರ್ಯದರ್ಶಿಗಳು

**ನಿರ್ಣಯ:**

ಸಮಿತಿಯ ಸಲಹೆಗಳು ಸ್ವೀಕೃತವಾದ ನಂತರ ಕ್ರಮ ನಿಯಮಾವಳಿಗಳಲ್ಲಿ ಏನಾದರೂ ಬದಲಾವಣೆಗಳು ಇದ್ದಲ್ಲಿ ಅಳವಡಿಸಿಕೊಂಡು ಸರ್ಕಾರಕ್ಕೆ ಸಲ್ಲಿಸಲು ಸಭೆಯು ತೀರ್ಮಾನಿಸಲಾಯಿತು.

**ವಿಷಯ ಕ್ರಮಾಂಕ (4) :**

ಸ್ನಾತಕ 2026-27 ನೇ ಶೈಕ್ಷಣಿಕ ಸಾಲಿನ 5 ಮತ್ತು 6ನೇ ಸೆಮಿಸ್ಟರ್‌ನ ಬಿ.ಎ ಮತ್ತು ಬಿ.ಎಸ್ಸಿ. ವ್ಯಾಸಂಗದ ಪಠ್ಯಕ್ರಮ ವಿನ್ಯಾಸದ ಕುರಿತು.

**ಚರ್ಚೆ :**

ಸ್ನಾತಕ ಪದವಿಯಲ್ಲಿ 2024-25ನೇ ಶೈಕ್ಷಣಿಕ ಸಾಲಿನಲ್ಲಿ ಎಸ್‌ಸಿಪಿ ಯೋಜನೆ ಅಡಿಯಲ್ಲಿ ಪ್ರವೇಶ ಪಡೆದು 2026-27ನೇ ಶೈಕ್ಷಣಿಕ ಸಾಲಿನಲ್ಲಿ 5 ಮತ್ತು 6ನೇ ಸೆಮಿಸ್ಟರ್ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 166 ಯುಎನ್‌ಇ 2023, ದಿನಾಂಕ: 08.05.2024 ರ ನಿರ್ದೇಶನದನುಸಾರ 1ನೇ ಸೆಮಿಸ್ಟರ್ ನಿಂದ 6ನೇ ಸೆಮಿಸ್ಟರ್‌ವರೆಗೆ ಪಠ್ಯಕ್ರಮವನ್ನು ವಿನ್ಯಾಸ ಮಾಡಲಾಗಿತ್ತು. ಸದರಿ ಪಠ್ಯಕ್ರಮದಲ್ಲಿ 5 ಮತ್ತು 6ನೇ ಸೆಮಿಸ್ಟರ್ ಬಿ.ಎ ಮತ್ತು ಬಿ.ಎಸ್ಸಿ. ಪಠ್ಯಕ್ರಮದಲ್ಲಿ ಮೂರು ಮೇಜರ್ ವಿಷಯಗಳನ್ನು ನೀಡಲಾಗಿತ್ತು. ಈ ವಿಷಯಕ್ಕೆ ಕುರಿತಂತೆ ರಾಯಚೂರು ಅನ್‌ಏಡೆಡ್ ಡಿಗ್ರಿ ಮ್ಯಾನೇಜಮೆಂಟ್ ಅಸೋಸಿಯೇಶನ್, ರಾಯಚೂರು ಇವರ ಮನವಿ ಪತ್ರ ದಿನಾಂಕ 21.07.2026 ಪ್ರಕಾರ ಸ್ನಾತಕ 2026-27 ನೇ ಶೈಕ್ಷಣಿಕ ಸಾಲಿನ 5 ಮತ್ತು 6ನೇ ಸೆಮಿಸ್ಟರ್‌ನ ಬಿ.ಎ ಮತ್ತು ಬಿ.ಎಸ್ಸಿ. ವ್ಯಾಸಂಗದ ಪಠ್ಯಕ್ರಮ ವಿನ್ಯಾಸದಲ್ಲಿ ಮೂರು ಮೇಜರ್ ವಿಷಯಗಳ ಕೇವಲ ಒಂದು ಡಿಎಸ್‌ಸಿ ಪತ್ರಿಕೆಯ ಬದಲು ವಿದ್ಯಾರ್ಥಿಯ ಉನ್ನತ ವ್ಯಾಸಂಗದ ಹೆಚ್ಚಿನ ಜ್ಞಾನದ ಹಿತದೃಷ್ಟಿಯಿಂದ ಎರಡು ಡಿಎಸ್‌ಸಿ ಪತ್ರಿಕೆಗಳನ್ನು ಓದಲು ಅನುಕೂಲಕರವಾಗುವಂತೆ ಪಠ್ಯಕ್ರಮವನ್ನು ಪರಿಷ್ಕರಿಸುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಯ ಅನುಸಾರ ದಿನಾಂಕ 22.07.2026 ರಂದು ಜರುಗಿದ ಡೀನರುಗಳ ಸಭೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಎರಡು ಡಿಎಸ್‌ಸಿ ಪತ್ರಿಕೆಗಳನ್ನು ಸೇರಿಸಿ ಪರಿಷ್ಕೃತ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ನಿರ್ಣಯಲಾಗಿರುತ್ತದೆ. ಸದರಿ ನಿರ್ಣಯದಂತೆ ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ ಕುಲಸಚಿವರು ದಿನಾಂಕ 27.07.2026 ರಂದು ಸುತ್ತೋಲೆಯನ್ನು ಹೊರಡಿಸಿ ಎರಡು ಡಿಎಸ್‌ಸಿ ಪತ್ರಿಕೆಗಳನ್ನು ಅಳವಡಿಸಿಕೊಂಡಿರುವ ಪರಿಷ್ಕೃತ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲಾಗಿರುತ್ತದೆ ಎಂದು ಸಭೆಗೆ ಕುಲಸಚಿವರು ವಿವರಿಸಿದರು.

**ನಿರ್ಣಯ:**

ವಿದ್ಯಾರ್ಥಿಯ ಉನ್ನತ ವ್ಯಾಸಂಗದ ಹೆಚ್ಚಿನ ಜ್ಞಾನದ ಹಿತದೃಷ್ಟಿಯಿಂದ ಸಭೆಯು ಸ್ನಾತಕ 2026-27 ನೇ ಶೈಕ್ಷಣಿಕ ಸಾಲಿನ 5 ಮತ್ತು 6ನೇ ಸೆಮಿಸ್ಟರ್‌ನ ಬಿ.ಎ ಮತ್ತು ಬಿ.ಎಸ್ಸಿ. ವ್ಯಾಸಂಗದ ಪರಿಷ್ಕೃತ ಪಠ್ಯಕ್ರಮವನ್ನು ಅನುಮೋದಿಸಲಾಯಿತು

**ವಿಷಯ ಕ್ರಮಾಂಕ (5) :**

ಸ್ನಾತಕ 2026-27 ನೇ ಶೈಕ್ಷಣಿಕ ಸಾಲಿನ 1 ರಿಂದ 6ನೇ ಸೆಮಿಸ್ಟರ್‌ನ ಪಠ್ಯಕ್ರಮ ವಿನ್ಯಾಸದ ಕುರಿತು.

**ಚರ್ಚೆ :**

ಸರ್ಕಾರದ ನಿರ್ದೇಶನ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು 2026-27ನೇ ಸಾಲಿನಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶವನ್ನು ಪಡೆಯುವ ವಿದ್ಯಾರ್ಥಿಗಳಿಗೆ ನೂತನ ಪಠ್ಯಕ್ರಮವನ್ನು

ಸಿದ್ಧಪಡಿಸಲಾಗಿದ್ದು. ಸದರಿ ಪಠ್ಯಕ್ರಮ ಈ ಹಿಂದಿನ (2024–25 ಸಾಲಿನ) ಪಠ್ಯಕ್ರಮದಲ್ಲಿ ಅವಲೋಕಿಸಿ ಅದರಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿ ನೂತನ ಪಠ್ಯಕ್ರಮವನ್ನು 2026–27ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ರಚಿಸಲಾಗಿರುತ್ತದೆ ಎಂದು ಸಭೆಗೆ ಕುಲಸಚಿವರು ತಿಳಿಸಿದರು

**ನಿರ್ಣಯ:**

ಸ್ನಾತಕ 2026–27 ನೇ ಶೈಕ್ಷಣಿಕ ಸಾಲಿನ 1 ರಿಂದ 6ನೇ ಸೆಮಿಸ್ಟರ್‌ನ ಪಠ್ಯಕ್ರಮವನ್ನು ಅನುಮೋದಿಸಲಾಯಿತು

**ವಿಷಯ ಕ್ರಮಾಂಕ (6) :**

NEP Scheme ನ ಅಡಿಯಲ್ಲಿ ಉಳಿದುಕೊಂಡಿರುವ 3 ಮತ್ತು 5ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳನ್ನು ಪ್ರವೇಶಾತಿ ನೀಡುವ ಕುರಿತು.

**ಚರ್ಚೆ:**

2021–22ನೇ ಶೈಕ್ಷಣಿಕ ಸಾಲಿನಿಂದ 2023–24ನೇ ಶೈಕ್ಷಣಿಕ ಸಾಲಿನವರೆಗೆ NEP Scheme ನ ಅಡಿಯಲ್ಲಿ ಪ್ರವೇಶವನ್ನು ಪಡೆದುಕೊಂಡು ಕಾರಣಾಂತರಗಳಿಂದ ವಿದ್ಯಾಭ್ಯಾಸವನ್ನು ಸ್ಥಗಿತಗೊಳಿಸಿ 2024–25 ನೇ ಶೈಕ್ಷಣಿಕ ವರ್ಷದಿಂದ ಮುಂದುವರೆಸಲು ಇಚ್ಚಿಸಿರುವ ವಿದ್ಯಾರ್ಥಿಗಳ ಪ್ರವೇಶಾತಿಯನ್ನು 2024–25ನೇ ಶೈಕ್ಷಣಿಕ ಸಾಲಿನಿಂದ ಘನ ಸರ್ಕಾರದ ನಿರ್ದೇಶನದನುಸಾರ SEP Scheme ನ ಅಡಿಯಲ್ಲಿ ಪ್ರವೇಶಾತಿಯನ್ನು ಮುಂದುವರೆಸಲು ಯುಯುಸಿಎಂಎಸ್ ಅಡಿಯಲ್ಲಿ ಬರುತ್ತಿಲ್ಲ. ಕಾರಣ ಯುಯುಸಿಎಂಎಸ್ ಪ್ರೊಜೆಕ್ಟ್ ಡೈರೆಕ್ಟರ್ ವಿಚಾರಿಸಲಾಗಿ ಸದರಿ ಪ್ರವೇಶಾತಿಯನ್ನು ಪಡೆದುಕೊಳ್ಳಲು ವಿಶ್ವವಿದ್ಯಾನಿಲಯದಲ್ಲಿ ಕರಡು ಕ್ರಮ ನಿಯಮಾವಳಿಗಳನ್ನು ರಚಿಸಿ ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದು ಸಲ್ಲಿಸಿದಲ್ಲಿ ಕ್ರಮ ವಹಿಸಲಾಗುವುದು ಎಂದು ತಿಳಿಸಿರುವುದರಿಂದ ಸದರಿ ಕ್ರಮನಿಯಮಾವಳಿಗಳನ್ನು ಸಭೆಗೆ ಸಲ್ಲಿಸಲಾಗಿತ್ತು.

**ನಿರ್ಣಯ:**

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ NEP Scheme ನ ಅಡಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು SEP Scheme ನ ಅಡಿಯಲ್ಲಿ 3 ಮತ್ತು 5ನೇ ಸೆಮಿಸ್ಟರ್ ಪ್ರವೇಶವನ್ನು ಪಡೆದು ತಮ್ಮ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಲು ಅನುಕೂಲವಾಗುವಂತೆ ರಚಿಸಿರುವ ಕರಡು ಕ್ರಮ ನಿಯಮಾವಳಿಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ವಿಷಯ ಕ್ರಮಾಂಕ (7) :**

ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಕುರಿತು ಚರ್ಚೆ.

1. ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಲ್ಲಿ 28 ಅಧ್ಯಯನ ವಿಭಾಗಗಳನ್ನು ಹೊಸದಾಗಿ ಪ್ರಾರಂಭಿಸಲು ವಿಭಾಗಗಳ ಕರಡು ನಿಯಮಾವಳಿಗಳನ್ನು ಅನುಮೋದಿಸುವ ಕುರಿತು.

**ಚರ್ಚೆ:**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಲ್ಲಿ 28 ಅಧ್ಯಯನ ವಿಭಾಗಗಳನ್ನು ಹೊಸದಾಗಿ ಪ್ರಾರಂಭಿಸಲು ದಿನಾಂಕ 10.09.2025 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯು "ಸರ್ಕಾರದ ಅನುಮತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ತಿರ್ಮಾನಿಸಲಾಯಿತು" ಎಂದು ನಿರ್ಣಯವನ್ನು ನೀಡಿರುತ್ತದೆ. ಮುಂದುವರೆದು ದಿನಾಂಕ 11.09.2025 ರಂದು ಜರುಗಿದ ಸಿಂಡಿಕೇಟ್ ಸಭೆಯು "ಒಟ್ಟು 28 ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನು ಪ್ರಾರಂಭಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು" ಎಂದು ನಿರ್ಣಯವನ್ನು ನೀಡಿರುತ್ತದೆ. ಮೇಲಿನ ನಿರ್ಣಯಗಳಂತೆ ದಿನಾಂಕ 12.12.2025 ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು ಸದರಿ ಪತ್ರಕ್ಕೆ ಉತ್ತರವಾಗಿ ಸರ್ಕಾರ ಪತ್ರ ಸಂಖ್ಯೆ ಇಡಿ 169 ಯುಜಿವಿ 2025 ದಿನಾಂಕ 01.01.2026 ರನ್ವಯ "ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಪತ್ರದಲ್ಲಿನ ಪ್ರಸ್ತಾಪಿಸಲಾದ 28 ಹೊಸ ಸ್ನಾತಕೋತ್ತರ ಪದವಿಗಳನ್ನು ಪ್ರಾರಂಬಿಸಲು ಸರ್ಕಾರದ ಆದೇಶ ಸಂಖ್ಯೆ ಇಡಿ 32 ಯುಜಿವಿ 2021 ದಿನಾಂಕ 14.07.2022 ರಲ್ಲಿನ ಷರತ್ತಿನನ್ವಯ ವಿಶ್ವವಿದ್ಯಾಲಯಕ್ಕೆ ಅಗತ್ಯವಾಗಿರುವ ಮೂಲಭೂತ ಸೌಕರ್ಯ, ಹುದ್ದೆಗಳು, ಆರ್ಥಿಕ ವೆಚ್ಚ, ಕೋರ್ಸುಗಳ ಅಗತ್ಯತೆ ಇತ್ಯಾದಿ ಅವಶ್ಯಕ ಅಂಶಗಳೊಂದಿಗೆ ನಿಯಮಾನುಸಾರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 44ರನ್ವಯ ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ವಿನಿಮಯವನ್ನು ರಚಿಸಿಕೊಂಡು ಸರ್ಕಾರಕ್ಕೆ ಸಲ್ಲಿಸಿದ್ದಲ್ಲಿ, ನಿಯಮಾನುಸಾರ ಪರಿಶೀಲಿಸಲಾಗುವುದು ಎಂದು ನಿರ್ದೇಶಿಸಲಾಗಿರುತ್ತದೆ. ಕಾರಣ ಸರ್ಕಾರದ ನಿರ್ದೇಶನದನುಸಾರ 28 ಅಧ್ಯಯನ ವಿಭಾಗಗಳ ಕರಡು ನಿಯಮಾವಳಿಗಳನ್ನು ರಚಿಸಲಾಗಿದೆ ಎಂದು ಸಭೆಗೆ ಕುಲಸಚಿವರು ವಿವರಿಸಿದರು, ಸಭೆಯು ಸುಧೀರ್ಘ ಚರ್ಚೆಯ ನಂತರ ಈ ಕೆಳಗಿನಂತೆ ನಿರ್ಣಯಿಸಲಾಯಿತು.

**ನಿರ್ಣಯ:**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಲ್ಲಿ ಈ ಕೆಳಕಾಣಿಸಿದ 28 ಅಧ್ಯಯನ ವಿಭಾಗಗಳ

| ಕ್ರ. ಸಂ. | ಸ್ನಾತಕೋತ್ತರ ಪದವಿ |
|---|---|
| 01 | M.A. in Linguistics |
| 02 | M.A. in Hindi |
| 03 | M.Sc. in Business Analytics and Economics |
| 04 | M.Sc. in Wild Life Management |
| 05 | Master of Physical Education (M.P.Ed.) |
| 06 | Master of Education (M.Ed.) |
| 07 | Master of Business Administration (M.B.A) |
| 08 | Master of Computer Application (M.C.A) |
| 09 | M.A in Folklore |
| 10 | M.Sc. in Food & Nutrition Techology |
| 11 | M.A. in Hotel Management |
| 12 | M.Sc. in Bio-Chemistry |
| 13 | M.Sc. in Bi0-Technology |
| 14 | Master of Fine Arts |
| 15 | M.A in Psychology |
| 16 | M.A in Philosophy |
| 17 | M.A in Public Administration |
| 18 | M.Sc. in Geography |
| 19 | M.Sc. in Artificial Intelligence and Machine Learning |
| 20 | M.A. in History & Archaeology |
| 21 | M.Sc. in Seeds Technology |
| 22 | M.Sc. in Cyber Security and Digital Forensic |
| 23 | M.Sc. in Environmental Science and Sustainability |
| 24 | Master of Tourism Administration |

| | |
|---|---|
| 25 | M.A. in Education |
| 26 | M.A. in Geography |
| 27 | M.Sc. in Applied Genetics and Genetic Counselling |
| 28 | M.Sc. in Pharmaceutical Chemistry |

ಪ್ರಾರಂಭಿಸಲು ವಿಭಾಗಗಳ ಕರಡು ನಿಯಮಾವಳಿಗಳನ್ನು ಸರ್ವಾನುಮತದಿಂದ ಅನುಮೋದಿಸಿ ಸರ್ಕಾರಕ್ಕೆ ರವಾನಿಸಲು ತೀರ್ಮಾನಿಸಲಾಯಿತು.

2. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಒಂದು ಮೇನ್ ಕೋರ್ಸು ಜೊತೆಗೆ ಒಂದು ಡಿಪ್ಲೋಮೊ ಕೋರ್ಸನ್ನು ಒಂದೇ ಶೈಕ್ಷಣಿಕ ವರ್ಷದಲ್ಲಿ ಪೂರ್ಣಗೊಳಿಸುವ ಕುರಿತು.

**ಚರ್ಚೆ :**

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಒಂದು ಮೇನ್ ಕೋರ್ಸು ಜೊತೆಗೆ ಒಂದು ಡಿಪ್ಲೋಮೊ ಕೋರ್ಸನ್ನು ಒಂದೇ ಶೈಕ್ಷಣಿಕ ವರ್ಷದಲ್ಲಿ ಪೂರ್ಣಗೊಳಿಸುವಂತೆ ಅನುಕೂಲಕರವಾಗುವಂತೆ ಪಿಜಿ ಡಿಪ್ಲೋಮೊ ಕೋರ್ಸುಗಳನ್ನು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಿಲು ಸೂಕ್ತ ಕ್ರಮ ಕೈಗೊಂಡರೆ ಉತ್ತಮವಾಗುತ್ತದೆ ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸದರು.

**ನಿರ್ಣಯ:**

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಡುಯಲ್ ಕೋರ್ಸ ಸಿಸ್ಟಮ್ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲು ಸಭೆಯು ಅನುಮೋದನೆಯನ್ನು ನೀಡಿತು.

3. ಪದವಿ ಕಾಲೇಜುಗಳಲ್ಲಿ ವಿಚಾರಗೋಷ್ಠಿಗಳನ್ನು ಜರುಗಿಸುವ ಕುರಿತು.

ಚರ್ಚೆ:

ಡಾ. ಈರಣ್ಣ. ಜೆ, ಇವರು ರಾಯಚೂರ ಮತ್ತು ಯಾದಗಿರಿ ಜಿಲ್ಲೆಗಳ ಪದವಿ ಕಾಲೇಜು ವಿದ್ಯಾರ್ಥಿಗಳ ಶೈಕ್ಷಣಿಕ ಮೌಲ್ಯಗಳನ್ನು ಅಭಿವೃದ್ಧಿ ಪಡಿಸಲು ವಿಚಾರಗೋಷ್ಠಿಗಳನ್ನು ಹಮ್ಮಿಕೊಂಡರೆ ಸೂಕ್ತವೆಂದು ಸಭೆಗೆ ತಿಳಿಸಿದರು ಇದಕ್ಕೆ ಉತ್ತರವಾಗಿ ಮಾನ್ಯ ಕುಲಸಚಿವರು ಕಾಲೇಜುಗಳಲ್ಲಿ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ವಿಚಾರಗೋಷ್ಠಿಗಳನ್ನು ಹಮ್ಮಿಕೊಂಡರೆ ವಿಶ್ವವಿದ್ಯಾನಿಲಯದಿಂದ ಸಹಕಾರ ಕೊಡಲಾಗುವುದು ಎಂದು ತಿಳಿಸಿದರು ಇದಕ್ಕೆ ಮಾನ್ಯ ಕುಲಪತಿಗಳು ವಿಚಾರಗೋಷ್ಠಿಗಳ ಪುಸ್ತಕ ಪ್ರಕಟಣೆಯ ರೂಪದಲ್ಲಿ ತಂದರೆ ಸೂಕ್ತ ಎಂದು ತಿಳಿಸಿದರು.

**ನಿರ್ಣಯ:**

ಅನುಮೋದಿಸಲಾಯಿತು.

ಸಭೆಯ ಕೊನೆಯಲ್ಲಿ ಕುಲಸಚಿವರು ಮಾನ್ಯ ಕುಲಪತಿಗಳಿಗೆ ಹಾಗೂ ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

16/9/26

**ಡಾ. ಎ. ಚನ್ನಪ್ಪ., ಕೆ.ಎ.ಎಸ್.**
ಕುಲಸಚಿವರು ಹಾಗೂ ಸದಸ್ಯಕಾರ್ಯದರ್ಶಿಗಳು

16/9/26

**ಪ್ರೊ. ಶಿವಾನಂದ ಕೆಳಗಿನಮನಿ**
ಕುಲಪತಿಗಳು ಹಾಗೂ ಅಧ್ಯಕ್ಷರು